3) ಕರ್ನಾಟಕ ಕೋಳಿ ಮೇವು ಮತ್ತು ಉತ್ಪಾದನೆ ಮತ್ತು ಮಾರಾಟ ನಿಯಮುಗಳನ್ನು ರೂಪಿಸುವುದು.

4) ಕೋಳಿ, ಕೋಳಿತತ್ತಿ, ಕೋಳಿ ಮಿಶ್ರಣ, ಆಹಾರ ಧಾನ್ಯಗಳ ಮೇಲಿನ ಮಾರಾಟ ತೆರಿಗೆಯನ್ನು ತೆಗೆಯುವ ಬಗೆ.

5) ಆಕಸ್ಮಿಕ ಅನಾಹುತಗಳಿಂದ ಕೋಳಿ ಉತ್ಪಾದಕರಿಗೆ ಆಗಬಹುದಾದ ನಷ್ಟಕ್ಕೆ ಪರಿಹಾರ ಒದಗಿಸುವ ದೃಷ್ಟಿಯಿಂದ, ಉದಾರ ನಿಯಮುಗಳ ಮೇಲೆ ವಿಮೆಯನ್ನು ಜಾರಿಗೆ ತರುವ ಬಗೆ.

6) ವ್ಯವಸಾಯಕ್ಕೆ (ಕೃಷಿ) ನೀಡಿರುವ ಸ್ಥಾನಮಾನವನ್ನೇ ಕೋಳಿ ಸಾಕಾಣಿಕೆಗೂ ನೀಡುವ ಬಗ್ಗೆ.

7) ಕೋಳಿ ಸಾಕಾಣಿಕೆ, ಸಹಕಾರ ಸಂಘಗಳಿಗೆ ಸವಲತ್ತು ಒದಗಿಸುವ ಬಗೆ.

ಶ್ರೀ ಹೆಚ್. ಜಿ. ಚನ್ನಪ್ಪ.—ಸ್ವಾಮಿ, ಈಗ ಸದ್ಯಕ್ಕೆ ಇನ್ನೆಲ್ಲವನ್ನೂ ಹೇಳಿದಿರಿ. ಈಗಿನ ಪರಿಸ್ಥಿತಿಯಲ್ಲಿ ಮಾರ್ಕೆಟ್ ವ್ಯವಸ್ಥೆ ಮಾಡುವುದಕ್ಕೆ ಏನಾದರೂ ಸಾಧ್ಯತೆ ಇದೆಯೇ ? ಕೋಳಿ ಮೊಟ್ಟೆಗಳನ್ನು ಮಾರಾಟ ಮಾಡುವುದಕ್ಕೆ ಮಾರ್ಕೆಟ್ ವ್ಯವಸ್ಥೆ ಇಲ್ಲವೆ ಇದು ಅಧೋಗತಿಯಲ್ಲಿದೆ. ಇದರ ಬಗ್ಗೆ ಕ್ರಮ ಕೈಕೊಳ್ಳುವುದಕ್ಕೆ ಏನಾದರೂ ವ್ಯವಸ್ಥೆ ಮಾಡಿದ್ದೀರಾ ?

ಶ್ರೀ ವಿಶ್ವನಾಥರೆಡ್ಡಿ.—ಮಾನ್ಯ ಅವ್ಯಕ್ಕರೇ, ಮೊದಲನೇ ಉತ್ತರದಲ್ಲಿ ಹೇಳಿರುವಂತೆ ರಾಜ್ಯಮಟ್ಟದ ಕೋಳಿ ಉತ್ಪಾದಕರ ಸಂಯುಕ್ತ ಸಹಕಾರ ಮಾರುಕಟ್ಟೆ ನಿಗಮವನ್ನು ಸ್ಥಾಪಿಸುವ ಬಗ್ಗೆ ನಾವು ವಿಚಾರ ಮಾಡುತ್ತಿದ್ದೇವೆ. ಆ ದೃಷ್ಟಿಯಿಂದ ಆ ಬಗ್ಗೆ ಕೂಡ ವಿಚಾರ ಮಾಡಬಹುದು.

ಶ್ರೀ ಹೆಚ್. ಜಿ. ಚನ್ನಪ್ಪ.—ಈ ಬಗ್ಗೆ ಪೌಲ್ಟ್ರಿ ಡೆವೆಲಪ್‌ಮೆಂಟ್ ಕಾರ್ಪೊರೇಷನ್ ರಚನೆ ಮಾಡಬೇಕೆಂಬ ಬಗ್ಗೆ ಆಲೋಚನೆ ಇದು, ಈ ಬಗ್ಗೆ ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ವಿಶ್ವನಾಥರೆಡ್ಡಿ.—ರಾಜ್ಯಮಟ್ಟದಲ್ಲಿ ಕೋಳಿ ಉತ್ಪಾದಕರ ಸಂಯುಕ್ತ ಸಹಕಾರ ಮಾರುಕಟ್ಟೆ ನಿಗಮವನ್ನು ಸ್ಥಾಪಿಸುವ ವಿಚಾರದಲ್ಲೇ ಈ ವಿಚಾರವೂ ಕೂಡ ಬಂದಿರಬಹುದು ಎನ್ನುತಕ್ಕಂಥ ಕಲ್ಪನೆಯನ್ನು ನಾನು ಕೊಡುತ್ತೇನೆ.

ಶ್ರೀ ಎಚ್. ಜಿ. ಚನ್ನಪ್ಪ.—ಈ ಬಗ್ಗೆ ಇನ್ನೂ ತೀರ್ಮಾನ ಆಗಿಲ್ಲವೇ ?

ಶ್ರೀ ವಿಶ್ವನಾಥರೆಡ್ಡಿ.—ಇದುವರೆಗೂ ಈ ಬಗ್ಗೆ ತೀರ್ಮಾನ ಆಗಿಲ್ಲ ; ಇದು ಇನ್ನೂ ಆಲೋಚನಾ ಮಟ್ಟದಲ್ಲಿದೆ.

ಬಳ್ಳಾರಿ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನಲ್ಲಿ ತೆರೆದ ಬಾವಿಗಳ ಬಗ್ಗೆ

115 ಶ್ರೀ ಬಿ. ಹೆಚ್. ಯಂಕಾ ನಾಯ್ಕ. (ಹರಪನಹಳ್ಳಿ).—ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯಿತಿರಾಜ್‌ಗಳ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳನ್ನು ಉತ್ತರಿಸುವಿರಾ:—

ಅ) ಹರಪನಹಳ್ಳಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಬಾವಿಗಳಿಲ್ಲದಿರುವ ಗ್ರಾಮಗಳ ಸಂಖ್ಯೆ ಎಷ್ಟು ; ಮತ್ತು ಅವುಗಳ ನಿರ್ಮಾಣ ಕಾರ್ಯವನ್ನು ಕೈಗೊಂಡು ಎಷ್ಟು ಅವಧಿಯೊಳಗಾಗಿ ಪೂರೈಸಲಾಗುವುದು.

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯಿತ್ ರಾಜ್‌ಗಳ ಮಂತ್ರಿಗಳು).—ಆರು ಗ್ರಾಮಗಳು ಮಾತ್ರ ಮತ್ತು ಕೆಲಸ ಪ್ರಾರಂಭವಾದಂದಿನಿಂದ ಒಂದು ವರ್ಷ.

ಶ್ರೀ ಬಿ. ಎಚ್. ಯಂಕಾನಾಯಕ:—ಸ್ವಾಮಿ ನಮ್ಮ ಭಾಗದಲ್ಲಿ ಕುಡಿಯುವುದಕ್ಕೆ ನೀರು ಇಲ್ಲ. ಅಲ್ಲಿ ಕೆರೆಗುಂಡಿಹಳ್ಳಿ, ಕಂಚಿಕೇರಿ ಮತ್ತಿತರ ಹಳ್ಳಿಗಳಲ್ಲಿ ತಾಲ್ಲೂಕ್ ಅಭಿವೃದ್ಧಿ ಮಂಡಳಿಯಿಂದ ಎತ್ತಿನಗಾಡಿ ಕಟ್ಟೆ ನೀರು ಒಯ್ಯುತ್ತಿದ್ದಾರೆ. ಈ ಬಗ್ಗೆ ಸರ್ಕಾರದವರು ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಎಂಬ ಬಗ್ಗೆ ದಯವಿಟ್ಟು ತಿಳಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಈ ಪ್ರಶ್ನೆಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ಅಲ್ಲಿ ಆರು ಹಳ್ಳಿಗಳು, ಏನೆ ಅವು ತುಂಗಭದ್ರಾ ಬಲದಂಡೆಯಲ್ಲಿರತಕ್ಕಂಥಾವುಗಳು. ಅಲ್ಲಿ ಜನರು ಬೇಸಿಗೆಕಾಲದಲ್ಲಿ ಪಾಲಿಫೆಬರ್‌ನಿಂದ ಕೆಟ್ಟ ನೀರು ಬರುತ್ತದೆಂದು ಹೇಳಿ ಆ ನೀರನ್ನು ಕುಡಿಯುತ್ತಾ ಇಲ್ಲ. ಅಲ್ಲಿ ನಾವು, ಓಪನ್ ವೆಲ್‌ಗಳನ್ನು ಮಾಡಿಲ್ಲ ; ಬೋರ್‌ವೆಲ್‌ಗಳು ಇವೆ. ಅಲ್ಲಿ ಸಾಕಷ್ಟು ನೀರು ಬರುತ್ತಾ ಇಲ್ಲ. ಮಾನ್ಯ ಸದಸ್ಯರು ಅವರ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಹೇಳಿದಾರೆ. ಆ ಬಗ್ಗೆ ಅವರು ಕಾಗದ ಬರೆದು ಕೊಡಲಿ ; ನಾನು ವಿಚಾರ ಮಾಡಿ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

ಸಿಡ್ಲಘಟ್ಟ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಉಪಾಧ್ಯಾಯರುಗಳ ಹುದ್ದೆಗಳ ಬಗ್ಗೆ

116 ಶ್ರೀ ಪಿ. ಮುನಿಯಪ್ಪ (ಸಿಡ್ಲಘಟ್ಟ) ಮಾನ್ಯ ಶಿಕ್ಷಣ ಮಂತ್ರಿಗಳು ಈಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೇ :—